ಅಧ್ಯಕ್ಷರು: ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಈ 2011ರ ಮಾರ್ಚ್‌ನಲ್ಲಿ ಬೆಳಗಾವಿಯಲ್ಲಿ ನಡೆದಂಥ ವಿಶ್ವ ಕನ್ನಡ ಸಮ್ಮೇಳನದ ನೆನಪಿಗಾಗಿ ಬೆಳಗಾವಿಯಲ್ಲಿ 25.00 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವಂತೆ Glass house and Garden ರೀತಿಯಲ್ಲಿ ಮಾಡಿಕೊಡುವುದಾಗಿ ಅಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದರು. ಅದರಂತೆ ಈಗಾಗಲೇ ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ತಂದು 5.00 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಮಾನ್ಯ ಶಾಸಕರು ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಮಾಡಿಸಿಕೊಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದಾರೆ. ಸರ್ಕಾರದಲ್ಲಿ ಸದರಿ ಬೇಡಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಕೆಯಿಂದಲೂ ಮಾಡಬಹುದು, ತೋಟಗಾರಿಕೆ ಇಲಾಖೆಯಿಂದಲಾದರೂ ಮಾಡಬಹುದು. ಆದರೆ ಮಾನ್ಯ ಶಾಸಕರ ಬೇಡಿಕೆಯಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದಲೇ ಮಾಡಿಕೊಡುವುದಕ್ಕೆ ಸರ್ಕಾರ ಒಪ್ಪಿಗೆಯನ್ನು ಸೂಚಿಸುತ್ತದೆ.

ಗಿರಿಜನರಿಗೆ ಜಮೀನು

13 (260) ಶ್ರೀ ಹೆಚ್ ಪಿ. ಮಂಜುನಾಥ್ (ಹುಣಸೂರು):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನಲ್ಲಿ 280 ಗಿರಿಜನ ಕುಟುಂಬಗಳನ್ನು ಕಾಡಿನಿಂದ ಸ್ಥಳಾಂತರಿಸಿ ಪುನರ್ ವಸತಿಗೊಳಿಸಲಾಗುತ್ತಿದ್ದು, ಪ್ರತಿ ಕುಟುಂಬಕ್ಕೆ ಸರ್ಕಾರದ ಪ್ಯಾಕೇಜ್ ಅನ್ವಯ 5 ಎಕರೆ ಜಮೀನನ್ನು ಗಡಿ ನಿಗಧಿಪಡಿಸಿ ಶಾಸನ ಬದ್ಧವಾಗಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಿ ಹಕ್ಕುಪತ್ರ ನೀಡಲಾಗಿದೆಯೇ ಮತ್ತು ಸದರಿ ಸರ್ವೆ ಕಾರ್ಯಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು (ವಿವರ ನೀಡುವುದು);

ಆ) ನಾಗಾಪುರ ಬ್ಲಾಕ್–1 ರಿಂದ 6 ಬ್ಲಾಕ್ ಗಳಲ್ಲಿನ ಗಿರಿಜನ ಕುಟುಂಬಗಳಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಇತರೆ ಮೂಲಗಳಿಂದ ಈವರೆಗೆ ಮಂಜೂರಾಗಿರುವ ಅನುದಾನವೆಷ್ಟು (ಆರ್ಥಿಕ ಹಾಗೂ ಭೌತಿಕ ವರದಿಯನ್ನು ನೀಡುವುದು);

ಇ) ಗಿರಿಜನರಿಗಾಗಿ ಸೌದೆ ಸಂಗ್ರಹ ವನ, ಮೇವು ಸಂಗ್ರಹಕ್ಕಾಗಿ ಹುಲ್ಲು, ಬನ್ನಿ ಸ್ಮಶಾನ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಿ ಅಭಿವೃದ್ಧಿ ಪಡಿಸಲಾಗಿದೆಯೇ (ವಿಸ್ತೀರ್ಣ, ಚಕ್ಕುಬಂದಿಗೆ ವೆಚ್ಚ ಮಾಡಿರುವ ಹಣವೆಷ್ಟು; ವಿವರ ನೀಡುವುದು);

ಈ) ಪುನರ್ ವಸತಿಗೊಂಡು 11 ವರ್ಷ ಕಳೆದರು ಗಿರಿಜನರಿಗೆ ಸಿಗಬೇಕಾದ

ಸಂಪೂರ್ಣ ಸವಲತ್ತುಗಳು ಸಿಗದೆ ವಂಚಿತರಾಗಿದ್ದು, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ. ಪಿ. ಯೋಗೇಶ್ವರ್ (ಮಾನ್ಯ ಅರಣ್ಯ ಸಚಿವರು):-

ಅ) ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಿಂದ ಸ್ವಇಚ್ಛೆಯಿಂದ ಸ್ಥಳಾಂತರಗೊಳ್ಳಲು ಇಚ್ಛಿಸಿದ ಗಿರಿಜನ ಕುಟುಂಬಗಳಿಗೆ ವಾಸದ ಮಾನ ಮತ್ತು ವ್ಯವಸಾಯದ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 8-7/94-ಎಫ್‌ಸಿ ದಿನಾಂಕ 19-07-1995ರಲ್ಲಿ ಹುಣಸೂರು ಪ್ರಾದೇಶಿಕ ವಿಭಾಗದ ವೀರನಹೊಸಳ್ಳಿ ಮೀಸಲು ಅರಣ್ಯದಿಂದ 401.00ಹೆ ಮತ್ತು ಸೊಳ್ಳೇಪುರ ಮೀಸಲು ಅರಣ್ಯದಿಂದ 330.00 ಹೆ ಒಟ್ಟು 731.00 ಹೆ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಪ್ರದೇಶದಲ್ಲಿ ನಾಗಪುರ ಘಟಕ-1 ರಿಂದ 5ರವರೆಗೆ ಪುನರ್ವಸತಿಗೊಳಿಸಿದ 250 ಗಿರಿಜನ ಕುಟುಂಬಗಳಿಗೆ ತಲಾ 5 ಎಕರೆಯಂತೆ ಹಾಗೂ ಘಟಕ-6ಕ್ಕೆ ಪುನರ್ವಸತಿಗೊಂಡ 30 ಗಿರಿಜನ ಕುಟುಂಬಗಳಿಗೆ ತಲಾ 3 ಎಕರೆಯಂತೆ ಹಂಚಿಕೆ ಮಾಡಲಾಗಿರುತ್ತದೆ. ಗಿರಿಜನರಿಗೆ ಹಂಚಿಕೆ ಮಾಡಲಾದ ಜಮೀನಿಗೆ ಹಕ್ಕು ಪತ್ರಗಳನ್ನು ನೀಡಿರುವುದಿಲ್ಲ.

ನಾಗಪುರ ಗಿರಿಜನ ಪುನರ್ವಸತಿ ಕೇಂದ್ರದಲ್ಲಿ ಗಿರಿಜನರಿಗೆ ಹಂಚಿಕೆ ಮಾಡಿರುವ ಜಮೀನುಗಳನ್ನು Total Station Survey ಕೆಲಸಗಳನ್ನು ಕೈಗೊಳ್ಳಲು ರೂ. 7,89,930-00 ಗಳನ್ನು ವೆಚ್ಚ ಮಾಡಲಾಗಿದೆ.

ಆ) ನಾಗಾಪುರ ಬ್ಲಾಕ್-1 ರಿಂದ 6 ರ ಬ್ಲಾಕ್ ಗಳಲ್ಲಿನ ಗಿರಿಜನ ಕುಟುಂಬಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚದ ವಿವರದ ತಃಖ್ತೆ ಲಗತ್ತಿಸಿದೆ. (ಅನುಬಂಧ-1) ಮತ್ತು ಭಾರತ ಪರಿಸರ ಅಭಿವೃದ್ಧಿ ಯೋಜನೆಯಡಿ ಭರಿಸಿರುವ ವೆಚ್ಚದ ತಃಖ್ತೆ ಲಗತ್ತಿಸಿದೆ (ಅನುಬಂಧ-2)

ಇ) ಗಿರಿಜನ ಪುನರ್ವಸತಿ ಪ್ಯಾಕೇಜ್‌ನ ಮೇವು ಮತ್ತು ಹುಲ್ಲು ಸಂಗ್ರಹಕ್ಕಾಗಿ ಭರಿಸಿರುವ ವೆಚ್ಚದ ತಃಖ್ತೆಯಲ್ಲಿ (ಅನುಬಂಧ-ii) ರಲ್ಲಿತ್ತದೆ. ಸೌದೆ ಸಂಗ್ರಹ ವನ, ಮೇವು ಸಂಗ್ರಹಕ್ಕಾಗಿ ಹುಲ್ಲು, ಬನ್ನಿ ಸ್ಮಶಾನ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲು ಅರಣ್ಯ ಭೂಮಿಯನ್ನು ಮೀಸಲಿಡಲಾಗಿದೆ. ಫಲಾನುಭವಿಗಳಿಗೆ ಹಂಚಿಕೆ ಮಾಡಿದ ವ್ಯವಸಾಯದ ಜಮೀನಿನ ಸುತ್ತಲೂ ಮರಗಿಡಗಳನ್ನು ಬೆಳಸಲಾಗಿದೆ. ಇದಕ್ಕೆ ರೂ. 3.89 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಈ) ಗಿರಿಜನ ಪುನರ್ವಸತಿ ಯೋಜನೆಯ ಪ್ಯಾಕೇಜ್‌ನ ಪ್ರಕಾರ ಮತ್ತು ಭಾರತ ಪರಿಸರ ಅಭಿವೃದ್ಧಿ ಯೋಜನೆಯಡಿ ಗಿರಿಜನರಿಗೆ ಸಿಗಬೇಕಾದ ಸಂಪೂರ್ಣ ಸವಲತ್ತುಗಳು ನೀಡಲಾಗಿರುತ್ತದೆ.

ಅನುಬಂಧ–1

Statement showing the details of amount released and spent towards relocation of tribals form THE RAJIV GANDHI NATIONAL PARK (Nagarahole)

Sl. No.	*Year*	*Budget Head*	*Amount Released*	*Remarks*
1	1998-1999	Beneficiary Oriented Tribal Development Scheme for relocation of ...	2,500,000.00	
2	1999-2000	-do- ...	6,850,000.00	
3	2000-2001	-do- ...	5,000,000.00	
4	2001-2002	-do- ...	15,000,000.00	
5	2002-2003	Development of Wildlife Sanctuaries and		
		National Parks (DWLSNP) ...	—	
6	2003-2004	-do- ...	—	
7	2004-2005	Centrally Sponsored Scheme Project Tiger (CSS-PT) ...	5,831,000.00	
8	2005-2006	-do- ...	—	
9	2006-2007	-do- ...	5,880,000.00	
		Total	**41,061,000.00**	

Note: 280 Tribal families has been relocated at Nagapura Block 1 to 6 during 1998-99 to 2006-07 and above amount released for relocation of tribals families of Nagapura and Sollepura

ಅನುಬಂಧ–2

Progress report of Tribal Rehabilitation of—
From Nagarahole National Park. From 1998-1999 to 2006—

Sl. No.	Particulars of Works	1998-1999		1999-2000		2000-2001		2001-2002	
		Phy. Achi.	Fin. Achi	Phy. Achi.	Fin. Achi	Phy. Achi.	Fin. Achi	Phy. Achi.	Fin. Achi
1	Land Development	—	—	50	9.32	155	36.24	45	39.745
2	Cash incentives for shifting	—	—	—	2.72	—	2.27	—	0.45
3	Community facilities	—	1.23	—	4.10	—	2.38	—	—
4	Building Materials	—	23.77	—	51.85	—	7.56	—	7.19
5	Transport of household goods	—	—	—	0.46	—	1.46	—	0.45
6	Pasture & fodder Plantation	—	—	—	—	—	—	—	—
7	Wood lot & fuel reserve	—	—	—	—	—	—	—	—
8	Miscellaneous activities	—	—	—	—	—	0.09	—	—
	Grand Total	—	**25.00**	—	**68.45**	—	**50.00**	—	**47.84**

(Nagapura Block-I to VI)
2007 In Wildlife Division, Hunsur

2002-2003		2003-2004		2004-2005		2005-2006		2006-2007		Total	
Phy. Achi.	Fin. Achi	Phy. Achi.	Fin. Achi	Phy. Achi.	Fin. Achi	Phy. Achi.	Fin. Achi	Phy. Achi.	Fin. Achi	Phy. Achi.	Fin. Achi
—	10.83	—	—	—	—	30	3.69	30	11.59	280	111.42
—	—	—	—	—	—	—	—	—	0.30	280	5.74
—	—	—	—	—	—	—	—	—	2.42	280	10.13
10.71	—	—	—	—	2.07	—	42.03	—	—	280	145.18
—	—	—	—	—	—	—	—	—	0.30	280	2.67
—	—	—	—	—	0.80	—	0.43	—	1.76	280	2.99
—	—	—	—	—	—	—	—	—	0.90	280	0.90
—	—	—	—	—	—	—	—	—	0.30	—	0.39
—	**21.54**	**—**	**—**	**—**	**2.87**	**—**	**46.15**	**—**	**17.57**	**-**	**279.42**

ಅನುಬಂಧ–2

Detalis of amount utilized for Nagapura tribal relocation area of Veeranahosahally Wildlife Range under India Eco-Development Project during 2001-02 to 2002-03.

ABSTRACT

(Rs. in lakhs)

Sl. No.	*Particular*	*Amount Spent*
1	Land Development Works (Bulidozer works, Tractor Ploughing Dis Ploughing etc., ...	13.14
2	Supply of seeds	3.35
3	Supply of Fertilizers	5.24
4	Supply of organic manure	2.44
5	Supply of seedlings	9.02
6	Watering to horticulture seedlings ...	3.71
7	Grain storage structure	3.87
8	Purchase of Thresher Machine... ...	0.50
9	Purchase of Diesel Engine	0.22
10	Agricultural works	1.89
11	Plastic sheet	0.15
	Sub Total	**43.53**
12	Construction of tanks	3.63
13	Driling of Borewell	2.00
	Sub Total	**5.63**
14	E.D.C. Benefits	
	a) Solar Lamps	10.40
	b) Kerosene Stove	0.53
	c) Woolen Rugs	1.29
	d) Copper Vessel	1.39
	e) Roofing materials	2.32
	f) Training (Tailoring, Driving) ...	0.66
	g) Community activities	0.80
	Sub Total	**17.39**
15	Excavation of EPT	24.54
16	Consultancy Payment (Prof Narayanagowda)	6.74
	Grand Total	**97.83**

ಶ್ರೀ ಹೆಚ್. ಪಿ. ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ, ಆದರೆ ಈ ಉತ್ತರವಂತೂ ಸಮರ್ಪಕವಾಗಿಲ್ಲ. ಕಾರಣ ಇಷ್ಟೇ. ಇದೊಂದು ಕೇಂದ್ರ ಸರ್ಕಾರ ಹಾಗೂ ಗಿರಿಜನರ ಹಿತದೃಷ್ಟಿಯಿಂದ ಮಹತ್ವಾಕಾಂಕ್ಷೆ ಯೋಜನೆಯಾಗಿದೆ. ಇದನ್ನು ಕಳೆದ 14 ವರ್ಷಗಳಿಂದ ಅನುಷ್ಠಾನಗೊಳಿಸಲಿಕ್ಕೆ ಆಗುತ್ತಿಲ್ಲ. ಇದರಲ್ಲಿ ಬದ್ಧತೆ ಇಲ್ಲದ ಅಧಿಕಾರಿಗಳು ಇರುವುದರಿಂದ ಈ ರೀತಿ ಕೊರತೆ ಕಂಡುಬರುತ್ತಿದೆ. ಇವತ್ತಿನ ದಿವಸ ಈ ಉತ್ತರದಿಂದ ಏನು ಕಾಣಿಸುತ್ತಿದೆ ಎಂದರೆ ಅರಣ್ಯ ಸಚಿವರಿಗಾಗಲೀ ಅಥವಾ ಸರ್ಕಾರಕ್ಕಾಗಲೀ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಗಿರಿಜನರ ಪನರ್ವಸತಿ ವಿಚಾರದ ಬಗ್ಗೆ ನಿಮಗೂ ಸಹ ಬಹಳ ಚೆನ್ನಾಗಿ ಗೊತ್ತಿದೆ. 14 ವರ್ಷಗಳಿಂದ ಇದು ಏತಕ್ಕೆ implement ಆಗಲಿಲ್ಲವೆನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಜೊತೆಗೆ ಈಗಾಗಲೇ ಕೋಟ್ಯಾಂತರ ರೂಪಾಯಿಗಳ ಹಣ ಇದಕ್ಕೆ ವೆಚ್ಚವಾಗಿದೆ. ಇವತ್ತು ನಾವು ಕೇಳಿರುವಂಥ ಮಾಹಿತಿಯಲ್ಲಿ ಮುಖ್ಯವಾಗಿರುವಂಥ ಪ್ರಶ್ನೆ ಏನೆಂದರೆ, ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿದ್ದೀರಿ. 14 ವರ್ಷಗಳಿಂದ ಯಾರೂ ಇದರಲ್ಲಿ ಕಾಳಜಿಯಾಗಲೀ, ಬದ್ಧತೆಯಾಗಲೀ ತೋರಿಸುತ್ತಿಲ್ಲ. ಕಳೆದ ಮೂರುವರೆ ವರ್ಷಗಳಿಂದಲೂ ಮಾಜಿ ಮುಖ್ಯಮಂತ್ರಿಯವರಾದ ಯಡಿಯೂರಪ್ಪನವರು ಮೌಖಿಕವಾಗಿ ಸೂಚನೆ ಕೊಟ್ಟರು. ಅಲ್ಲದೆ ಮೈಸೂರಿನ ಅಧಿಕಾರಿಗಳು ಇದನ್ನು ಕಾರ್ಯಗತಗೊಳಿಸಲಿಕ್ಕೆ ಇಚ್ಛೆಪಡಲಿಲ್ಲ. ಇದಲ್ಲದೆ ಶ್ರೀ ಸುರೇಶ್ ಕುಮಾರ್ ರವರು ಇದರ ಬಗ್ಗೆ ಒಂದು ಸಭೆಯನ್ನು ಕೂಡ ಮಾಡಿದರು. ಆ ದಿವಸದಿಂದ ಈ ವಿಷಯ ಯಾವ ಹಂತದಲ್ಲಿ ನಿಂತಿದೆಯೋ ಇವತ್ತಿಗೂ ಅದೇ ಹಂತದಲ್ಲಿ ನಿಂತಿದೆ. ಗಿರಿಜನರಿಗೆ ಈ ಹಕ್ಕನ್ನು ಕೊಡಲಿಕ್ಕೆ ಈಗಾಗಲೇ ಜಮೀನು ನಿರ್ಧಾರವಾಗಿದೆ. ಅದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳ ವೆಚ್ಚಾವಾಗಿದೆ. ಇವತ್ತು ಅರಣ್ಯ ಮತ್ತು ಕಂದಾಯ ಇಲಾಖಾಧಿಕಾರಿಗಳು ಬದ್ಧತೆಯನ್ನು ತೋರಿಸಿದರೆ ಒಂದೇ ವಾರದಲ್ಲಿ ಖಂಡಿತವಾಗಿ ಈ ಕೆಲಸವಾಗುತ್ತದೆ. ಮುಖ್ಯವಾಗಿ ನನ್ನ ಭಾವನೆ ಏನಿದೆ ಎಂದರೆ ರೈತರ ಜಮೀನುಗಳನ್ನು ಈ ಸರ್ಕಾರ ತೆಗೆದುಕೊಂಡು ಬಿಡುತ್ತದೆ ಎಂಬ ಕೆಟ್ಟ ಹೆಸರಿನ ಕಳಂಕ ಇದೆ. ಇದನ್ನು ತಡೆಯಬೇಕಾದರೆ ಮಾನ್ಯ ಸಚಿವರು ಎರಡು ಮೂರು ದಿವಸಗಳಲ್ಲಿ ಬಂದು ಇದೇ ವಿಚಾರದ ಬಗ್ಗೆ ಪರಿಶೀಲನೆ ಮಾಡಬೇಕು. ಇಲ್ಲದಿದ್ದರೆ ಇಷ್ಟೊಂದು ದಿವಸಗಳ ಕಾಲ ತಡವಾಗುವುದಕ್ಕೆ ಯಾರು ಕಾರಣರೆಂಬ ಬಗ್ಗೆ ಒಂದು ತನಿಖೆಯನ್ನು ನಡೆಸಬೇಕು. ಏಕೆಂದರೆ ಇದಕ್ಕೆ 17.00 ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚವಾಗಿದೆಯೆಂಬುದು ತಮಗೆ ಗೊತ್ತಿರುವ ವಿಚಾರ. ಈ ಸದನದಿಂದ ನಾನು ತಮ್ಮಲ್ಲಿ ತಿಳಿಸಬಯಸುವುದೇನೆಂದರೆ

ಅವರು ಆದಷ್ಟು ಬೇಗ ಖುದ್ದು ಅಲ್ಲಿಗೆ ಬಂದು ಗಿರಿಜನರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಪಿ. ಯೋಗೆಶ್ವರ್: ಅಧ್ಯಕ್ಷರೆ, ಮಾನ್ಯ ಸದಸ್ಯರ ಜೊತೆ ಚರ್ಚೆ ಮಾಡಿ ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ಅವರು ಹೇಳುತ್ತಿರುವಂತೆ ಇಲ್ಲಿಯವರೆಗೂ ನಡೆದಿರುವ ವಿಚಾರ ಸತ್ಯ, ಆ ಜಮೀನು ಗಿರಿಜನರಿಗೆ ಹಸ್ತಾಂತರವಾಗಿಲ್ಲ. ಅದನ್ನೂ ಕೂಡ ಸರಿಪಡಿಸುತ್ತೇವೆ. ಅವರು ವಾಸವಿದ್ದಾರೆ, ಹಕ್ಕುಪತ್ತ ಹಸ್ತಾಂತರವಾಗಬೇಕು.

ಅಧ್ಯಕ್ಷರು: ಸಚಿವರು ಬೇಗ ಮಾಡಿಕೊಡಬೇಕು.

ಶ್ರೀ ಸಿ. ಪಿ. ಯೋಗೆಶ್ವರ್: ಅವರು ವಾಸವಿದ್ದಾರೆ, ಹಕ್ಕುಪತ್ರ ಬಿಡುಗಡೆಯಾಗಿದ್ದು ಅದು ಅವರಿಗೆ ಹಸ್ತಾಂತರವಾಗಬೇಕು. ಅದನ್ನು ಬೇಗ ಮಾಡಿಕೊಡುತ್ತೇವೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್: 1995 ರಲ್ಲಿ 250 ಜನಕ್ಕೆ ಜಮೀನು ಹಸ್ತಾಂತರ ಮಾಡಿ ಈಗಾಗಲೇ ಹದಿನಾರು ವರ್ಷಗಳಾಯಿತು. ಅವರಿಗೆ ಹಕ್ಕುಪತ್ರ ಸಿಗಲಿಲ್ಲವೆಂದರೆ ಹೇಗೆ? ಕೇಂದ್ರ ಸರ್ಕಾರದ ಅನುದಾನದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿ ಜಮೀನಿನ ಹಕ್ಕು ಅವರಿಗೆ ಸಿಗಲಿಲ್ಲವೆಂದರೆ ಏನು ಪ್ರಯೋಜನವಾಗುತ್ತದೆ? ಆದುದರಿಂದ ಅವರಿಗೆ ಆದಷ್ಟು ಬೇಗ ಆ ಜಮೀನಿನ ಹಕ್ಕುಪತ್ತ ಕೊಡಿಸುವ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಸಿದ್ಧರಾಮಯ್ಯ: ಅನವಶ್ಯಕವಾಗಿ Forest Department ನವರು ಈ ವಿಚಾರದ ಮೇಲೆ ನಿದ್ದೆ ಮಾಡುತ್ತಿದ್ದಾರೆ. They are sleeping over the matter. ಇವರಿಗೆ 14 years ಬೇಕಾ? ನನಗೆ ಅರ್ಥವಾಗುವುದಿಲ್ಲ. What is that your department is doing? ಬಿಡುಗಡೆಯಾಗಿದೆ, ಹಕ್ಕು ಪತ್ರ ಕೊಡುವುದಕ್ಕೆ ಎಷ್ಟು ದಿವಸ ಬೇಕು?

ಒಬ್ಬ ಮಾನ್ಯ ಸದಸ್ಯರು: ಜಿಲ್ಲಾಧಿಕಾರಿಗಳು ಕೊಡಬೇಕು.

ಶ್ರೀ ಸಿದ್ಧರಾಮಯ್ಯ: ಯಾವಾಗ ಆಯಿತು? ನಿಮಗೆ ಅವರು ಬಿಡುಗಡೆ ಮಾಡಿ, ಕೊಟ್ಟು ಎಷ್ಟು ದಿನವಾಯಿತು? ಇವರಿಗೆ ಇಷ್ಟು ದಿನ ಬೇಕಾ? What is the concerned officer is doing?

(ಗೊಂದಲ)

ಅಧ್ಯಕ್ಷರು: ತಕ್ಷಣ ಜಿಲ್ಲಾಧಿಕಾರಿಗಳೊಂದಿಗೆ ಸಭೆ ಮಾಡುತ್ತಾರೆ

ಶ್ರೀ ಸಿದ್ಧರಾಮಯ್ಯ: When the decision has been taken, ಏಳು ವರ್ಷಗಳಿಂದ ಏನು ಮಾಡುತ್ತಿದ್ದೀರಿ? ಎಷ್ಟನೇ ಇಸವಿಯಲ್ಲಿ ಕೊಟ್ಟಿರುವುದು? 1995 ನಲ್ಲಿ ಕೊಟ್ಟಿರುವುದು 1995 ಎಂದರೆ ಈಗ ಎಷ್ಟು ವರ್ಷಗಳಾಯಿತು ಮಾನ್ಯ ಅಧ್ಯಕ್ಷರೆ? ಹಕ್ಕು ಪತ್ರ ಕೊಡುವುದಕ್ಕೆ ಇವರಿಗೆ ಹದಿನಾರು ವರ್ಷಗಳು ಬೇಕೇ? ಪ್ರತಿ ಸಾರಿ ಕೇಳೀದಾಗಲೂ ಇದೇ ಉತ್ತರ. ಹಿಂದಿನ ಸಲ ಕೇಳಿದಾಗ ಕನ್ನಡ ಇದೇ ಉತ್ತರ. ಈಗಲೂ ಇದೇ ಉತ್ತರ. ನಾಳೆ ಪುನಃ ಇದೇ ಉತ್ತರ. ಅದಕ್ಕೆ ನೀವು ಒಂದು ವಾರದಲ್ಲಿ ಇದನ್ನು ಮಾಡುತ್ತೇವೆ ಎಂದು time-bound limit ಹಾಕಿಕೊಳ್ಳಬೇಕು. ಇಲ್ಲಿ ಮಂತ್ರಿಗಳು ಉತ್ತರ ಕೊಡಬೇಕು. ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಅಧಿಕಾರಿಗಳ ಜೊತೆ ಮೀಟಿಂಗ್ ಮಾಡಿ within a week ನಾನು ಅವರೆಲ್ಲರಿಗೂ ಕೂಡ ಹಕ್ಕುಪತ್ರ ಕೊಡಿಸಿಕೊಡುತ್ತೇನೆ ಎಂದು ಹೇಳಲಿ. ಈಗಾಗಲೇ ಕೋಟಿಗಟ್ಟಲೆ ಹಣ ಖರ್ಚಾಗಿದೆ. It is going to be a waste.

ಅಧ್ಯಕ್ಷರು: ಆದಷ್ಟು ಬೇಗ ಮಾಡುತ್ತಾರೆ

ಶ್ರೀ ಸಿದ್ಧರಾಮಯ್ಯ: No. No. ಆದಷ್ಟು ಬೇಗ ಅಲ್ಲ. ಒಂದು ವಾರದಲ್ಲಿ ಇದನ್ನು ನೀವು ಮಾಡಬೇಕು. ಏನು ನೀವು ಇಷ್ಟು ಉತ್ಸಾಹದಿಂದ ಇರುವ ಮಂತ್ರಿಗಳು ನೀವು ಬಂದು ಹೀಗೆ ಆದರೆ ಹೇಗೆ ಯೋಗೇಶ್ವರ್‌ರವರೆ?

ಅಧ್ಯಕ್ಷರು: ಅವರು ಪ್ರವಾಸ ಮಾಡುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಪ್ರವಾಸ ಮಾಡುವುದನ್ನು ಬಿಡಿ. ಇದನ್ನು ಹೇಳಿ

(ಗೊಂದಲ)

ಶ್ರೀ ಸಿ. ಪಿ. ಯೋಗೇಶ್ವರ್: ಮಹದೇವ ಪ್ರಸಾದ್ ರವರ constituency ಗೆ ಹೋಗಿದ್ದೆ, ಮಾಡಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಒಂದು ವಾರದಲ್ಲಿ ಮಾಡುತ್ತೇವೆ ಎಂದು ಹೇಳಿ. ಜನರಿಗೆ ಸ್ವಲ್ಪ ಒಳ್ಳೆಯ message ಹೋಗಲಿ, ಅಧಿಕಾರಿಗಳಿಗೂ ಸಹ ಸ್ವಲ್ಪ ಬಿಸಿ ಮುಟ್ಟುತ್ತದೆ.

ಶ್ರೀ ಸಿ. ಪಿ. ಯೋಗೇಶ್ವರ್: ಮಾನ್ಯ ಅಧ್ಯಕ್ಷರೆ, ಒಂದು ತಿಂಗಳ ಕಾಲಾವಕಾಶ ಕೊಡಿ

ಶ್ರೀ ಸಿದ್ಧರಾಮಯ್ಯ: ಹಾಗಾದರೆ ಯಾವ ಅಧಿಕಾರಿಗಳು ಇದನ್ನು neglect ಮಾಡಿದ್ದಾರೆ, irresponsible ಆಗಿ behave ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಲಿ. 16 ವರ್ಷಗಳು ಬೇಕಾ?

ಅಧ್ಯಕ್ಷರು: ಒಂದು ತಿಂಗಳಲ್ಲಿ ಮಾಡುತ್ತಾರೆ.

ಶ್ರೀ ಸಿದ್ಧರಾಮಯ್ಯ: ಒಂದು ತಿಂಗಳಲ್ಲಿ ಮಾಡುತ್ತಾರೆ? Ok.

ಅಧ್ಯಕ್ಷರು: ಆಯಿತು

ಹನೂರು ಟೈಗರ್ ಪ್ರಾಜೆಕ್ಟ್

15 (72) ಶ್ರೀ ನರೇಂದ್ರ ಆರ್. (ಹನೂರು):– ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹನೂರು ವಲಯದಲ್ಲಿ ಟೈಗರ್ ಪ್ರಾಜೆಕ್ಟ್‌ಗೆ ಒಳಪಡುವ ಗ್ರಾಮಗಳಾವುವು; (ಹೆಸರುಗಳ ವಿವರ ನೀಡುವುದು);

ಆ) ಆ ಗ್ರಾಮಗಳ ಜನರನ್ನು ಒಕ್ಕಲೆಬ್ಬಿಸಬಹುದಾದ ಸಂದರ್ಭದಲ್ಲಿ ಅವರಿಗೆ ಕಲ್ಪಿಸಲು ಉದ್ದೇಶಿಸಲಾಗಿರುವ ಸೌಲಭ್ಯಗಳೇನು?

ಶ್ರೀ ಸಿ. ಪಿ. ಯೋಗೆಶ್ವರ್ (ಅರಣ್ಯ ಸಚಿವರು):–

ಅ) ಹನೂರು ವಲಯದ ಯಾವುದೇ ಕಂದಾಯ ಗ್ರಾಮಗಳು ಬಿ.ಆರ್.ಟಿ. ವನ್ಯಧಾಮದ ವ್ಯಾಪ್ತಿಯ ಟೈಗರ್ ಪ್ರಾಜೆಕ್ಟ್‌ನ ಕೋರ್ ಮತ್ತು ಬಫರ್ ಪ್ರದೇಶಗಳಲ್ಲಿ ಒಳಗೊಂಡಿರುವುದಿಲ್ಲ. ಆದಾಗ್ಯೂ ಹನೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೊಳಪಡುವ ಈ ಕೆಳಕಂಡ ಗ್ರಾಮಗಳು ಬಿ.ಆರ್.ಟಿ. ವನ್ಯಧಾಮದ ವ್ಯಾಪ್ತಿಯ ಸುತ್ತ ಬರುವ "ಪರಿಸರ ಸೂಕ್ಷ್ಮ ವಲಯ" (Eco-Sensitive Zone) ದ ಪ್ರಸ್ತಾವನೆಯಲ್ಲಿ ಒಳಗೊಂಡಿರುತ್ತವೆ.